ಇ) ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ನ್ಯಾಯಬೆಲೆ ಅಂಗಡಿ ಹಂಚಿಕೆ ವಿಚಾರದಲ್ಲಿ ಅಂಗವಿಕಲರ ಶೇ. 3 ಮೀಸಲಾತಿಯನ್ನು ಕಡೆಗಣಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ ನಿಯಮಗಳು, 1977ರ ನಿಯಮ 9 (1ಎ) ರನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿ "ಸಿ" ಮತ್ತು "ಡಿ" ದರ್ಜೆಯ ಹುದ್ದೆಗಳ ನೇರ ನೇಮಕಾತಿಯಲ್ಲಿ ಅಂಗವಿಕಲರಿಗೆ ಶೇಕಡ 5 ರಷ್ಟು ಮೀಸಲಾತಿ ಕಲ್ಪಿಸಲಾಗಿದೆ.

ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿ ನ್ಯಾಯಬೆಲೆ ಅಂಗಡಿ ಮಂಜೂರಾತಿ ನೀಡುವಲ್ಲಿ ಅಂಗವಿಕಲರಿಗೆ ಶೇಕಡ 3 ರಷ್ಟು ಮೀಸಲಾತಿಯನ್ನು ನೀಡುವ ಬಗ್ಗೆ ಕರಡನ್ನು ಸಾರ್ವಜನಿಕ ವಿತರಣೆ ಪದ್ಧತಿ (ನಿಯಂತ್ರಣ) ಆದೇಶದಲ್ಲಿ ಪ್ರಸ್ತಾಪಿಸಲಾಗಿದೆ. ಸಧ್ಯ ಜಾರಿಯಲ್ಲಿರುವ ಆದೇಶದಲ್ಲಿ ಖಾಸಗಿ ವ್ಯಕ್ತಿಗಳಿಗೆ ಮಂಜೂರಾತಿ ನೀಡುವ ವೇಳೆಯಲ್ಲಿ ಅಂಗವಿಕಲರಿಗೆ ಆದ್ಯತೆ ಕಲ್ಪಿಸಲಾಗಿದೆ.

ಆ) ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಮೀಸಲಾತಿ ಕಲ್ಪಿಸಲಾಗಿದೆ.

ಇ) ಹೊನ್ನಾಳಿ ತಾಲ್ಲೂಕಿನಲ್ಲಿ ಒಟ್ಟು 69 ಖಾಸಗಿ ವ್ಯಕ್ತಿಗಳಲ್ಲಿ ಇಬ್ಬರು ಅಂಗವಿಕಲರಿಗೆ ನ್ಯಾಯಬೆಲೆ ಅಂಗಡಿ ಮಂಜೂರು ಮಾಡಲಾಗಿದೆ.

ಈ) ಉದ್ಭವಿಸುವುದಿಲ್ಲ.

5610(6247) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ವರ್ಗಗಳ, ಪರಿಶಿಷ್ಟ ಜಾತಿ/ವರ್ಗಗಳ ಹಾಗೂ ಅಲ್ಪಸಂಖ್ಯಾತರ ಪೈಕಿ ಆರ್ಥಿಕವಾಗಿ ಹಿಂದುಳಿದವರು ಸಹಕಾರ ಸಂಘಗಳಲ್ಲಿ ಸದಸ್ಯರಾಗ ಬಯಸಿದ್ದಲ್ಲಿ, ಸದಸ್ಯತ್ವದ ಶುಲ್ಕವನ್ನು ಭರಿಸುವ ಬಗೆಗಿನ ಯೋಜನೆ ಸರ್ಕಾರಕ್ಕಿದೆಯೇ;

ಆ) ಹಾಗಿದ್ದಲ್ಲಿ, ಯಾವ ಹಂತದಲ್ಲಿದೆ; ಯೋಜನೆಯನ್ನು ಜಾರಿಗೊಳಿಸುವುದು ಯಾವಾಗ (ವಿವರ ನೀಡುವುದು)?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು):

ಅ) ಹೌದು.

ಆ) ಸಕ್ರಿಯ ಪರಿಗಣನೆಯಲ್ಲಿದ್ದು, 2005–06ನೇ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಯೋಜನೆಯನ್ನು ಜಾರಿಗೊಳಿಸಲಾಗುವುದು.

5611(6408) : ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಎಲ್ಲೆಲ್ಲಿ ಹಾಪ್‌ಕಾಮ್ಸ್ ಮಳಿಗೆಗಳಿವೆ;

ಆ) ಹೊಸದಾಗಿ ಯಾವ ಯಾವ ಹಾಪ್‌ಕಾಮ್ಸ್ ಮಳಿಗೆಗಳನ್ನು ತೆರೆಯಬೇಕೆಂಬ ಮನವಿ ಯಾರ್ಯಾರಿಂದ ಬಂದಿವೆ;

ಇ) ಮನವಿಗಳ ಬಗ್ಗೆ ಯಾವ ಕ್ರಮ ವಹಿಸಲಾಗಿದೆ:

ಈ) ಹೊಸದಾಗಿ ಹಾಪ್‌ಕಾಮ್ಸ್ ಮಳಿಗೆಗಳನ್ನು ಎಲ್ಲೆಲ್ಲಿ ತೆರೆಯಲಾಗುವುದು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು):

ಅ) ಮೈಸೂರು ನಗರದಲ್ಲಿ ಈ ಕೆಳಕಂಡ 38 ಸ್ಥಳಗಳಲ್ಲಿ ಹಾಪ್‌ಕಾಮ್ಸ್ ಮಳಿಗೆಗಳು ಇರುತ್ತದೆ.

1. ಕರ್ಜನ್ ಪಾರ್ಕ್ ಆವರಣ–4
2. ಗೋಪಾಲಗೌಡ ಆಸ್ಪತ್ರೆ
3. ಸಿದ್ಧಾರ್ಥ ಲೇಔಟ್
4. ಕುವೆಂಪುನಗರ ಎಂ. ಬ್ಲಾಕ್
5. ಸರಸ್ವತಿಪುರಂ
6. ಕುವೆಂಪುನಗರ ಕಾಂಪ್ಲೆಕ್ಸ್
7. ಗಂಗೋತ್ರಿ ಹುಡ್ಕೋ ಬಡಾವಣೆ
8. ಗಂಗೋತ್ರಿ ಕಾಂಪ್ಲೆಕ್ಸ್
9. ಜಯನಗರ ಪಾರ್ಕ್
10. ಈಶ್ವರ ದೇವಸ್ಥಾನ ವೃತ್ತ
11. ಆರ್.ಬಿ.ಐ. ಬಡಾವಣೆ
12. ರೈಲ್ವೆ ಸ್ಟೇಷನ್
13. ಗ್ರಾಮಾಂತರ ಬಸ್ ನಿಲ್ದಾಣ
14. ನಗರ ಸಾರಿಗೆ ಬಸ್ ನಿಲ್ದಾಣ
15. ನಂಜನಗೂಡು ಬಸ್ ನಿಲ್ದಾಣ
16. ನರಸೀಪುರ ಬಸ್ ನಿಲ್ದಾಣ
17. ಮಾರುತಿ ದೇವಸ್ಥಾನ
18. ಗಾಯತ್ರಿಪುರಂ
19. ವಿಜಯನಗರ ಕೃಷ್ಣದೇವರಾಯ ಸರ್ಕಲ್
20. ಚಾಮರಾಜ ಜೋಡಿ ರಸ್ತೆ
21. ಬಲ್ಲಾಳ್ ಸರ್ಕಲ್
22. ಚಾಮುಂಡಿಪುರಂ
23. ಕುವೆಂಪು ಹೈಸ್ಕೂಲ್ ಪಕ್ಕ
24. ತೊಣಚಿಕೊಪ್ಪಲ್
25. ಬೃಂದಾವನ ಬಡಾವಣೆ
26. ಮೃಗಾಲಯದ ಹತ್ತಿರ
27. ಅಕ್ಷಯ ಭಂಡಾರ
28. ಸ್ಟರ್ಲಿಂಗ್ ಟಾಕೀಸ್ ಹತ್ತಿರ
29. ಚಾಮುಂಡಿ ಬೆಟ್ಟ

30. ಜೆ ಎಸ್ ಎಸ್ ಆಸ್ಪತ್ರೆ
31. ಉದಯಗಿರಿ
32. ನಿರ್ಮಲ ಕಾನ್ವೆಂಟ್
33. ವಿಶ್ವಮಾನವ ಜೋಡಿ ರಸ್ತೆ
34. ರಾಮಕೃಷ್ಣನಗರ ಇಎಫ್.ಬ್ಲಾಕ್
35. ವಿವೇಕಾನಂದನಗರ
36. ಎಸ್.ಆರ್. ಮೊಹಲ್ಲಾ
37. ಹೆಬ್ಬಾಳು 1ನೇ ಹಂತ
38. ಆದಿಚುಂಚನಗಿರಿ ರಸ್ತೆ

ಆ) ಸಂಕ್ರಾಂತಿ ಸ್ತ್ರೀಶಕ್ತಿ ಸ್ವಸಹಾಯ ಸಂಘ ಬನ್ನಿ ಮಂಟಪ, ಎ ಬಡಾವಣೆ, ಮೈಸೂರುರವರಿಂದ ಹೊಸದಾಗಿ ಹಾಪ್‌ಕಾಮ್ಸ್ ಮಳಿಗೆ ತೆರೆಯುವಂತೆ ಮನವಿ ಬಂದಿರುತ್ತದೆ.

ಇ) ಈ ಮನವಿ ಬಗ್ಗೆ ಪರಿಶೀಲಿಸಿ, ಮಳಿಗೆ ತೆರೆಯಲು ಸ್ಥಳಾವಕಾಶ ಕಲ್ಪಿಸಿಕೊಡುವಂತೆ ಕೋರಿ, ಆಯುಕ್ತರು, ಮಹಾನಗರ ಪಾಲಿಕೆ, ಮೈಸೂರು, ಇವರಿಗೆ ದಿನಾಂಕ: 7.9.2004 ರಂದು ಪತ್ರವನ್ನು ಮೈಸೂರು ಹಾಪ್‌ಕಾಮ್ಸ್‌ನಿಂದ ಬರೆಯಲಾಗಿದೆ.

ಈ) ಈ ಕೆಳಕಂಡ ಸ್ಥಳಗಳಲ್ಲಿ ಮಳಿಗೆಗಳನ್ನು ತೆರೆಯಲು ಉದ್ದೇಶಿಸಲಾಗಿದೆ.

1. ಶಾರದಾದೇವಿ ನಗರ
2. ಜೆ.ಪಿ. ನಗರ ಸಿ ಬ್ಲಾಕ್
3. ಜೆ.ಪಿ. ನಗರ ಡಿ ಬ್ಲಾಕ್
4. ಹೆಬ್ಬಾಳ್ ಬಡಾವಣೆ 1ನೇ ಹಂತ
5. ಹೆಬ್ಬಾಳ್ ಬಡಾವಣೆ 2ನೇ ಹಂತ
6. ವಿಜಯನಗರ 1ನೇ ಹಂತ

5612(6409) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನ ಆರ್.ಎಂ.ಸಿ. ಯಾರ್ಡ್‌ನಲ್ಲಿ ಯಾವ ಯಾವ ವ್ಯಾಪಾರವನ್ನು ಎಷ್ಟು ಮಂದಿ ವ್ಯಾಪಾರಿಗಳು ನಡೆಸುತ್ತಿದ್ದಾರೆ?

ಆ) ಹಾಲಿ ಇಲ್ಲಿರುವ ಮೂಲಭೂತ ಸೌಕರ್ಯಗಳೇನು ಹಾಗೂ ಯಾವ ಮೂಲಭೂತ ಸೌಕರ್ಯ ಕಲ್ಪಿಸಬೇಕಿದೆ?

ಇ) ಮೂಲಭೂತ ಸೌಕರ್ಯ ಕಲ್ಪಿಸಬೇಕಾದಲ್ಲಿ ಆಗುವ ವೆಚ್ಚವೆಷ್ಟು; ಹೊಸದಾಗಿ ಮೂಲಭೂತ ಸೌಕರ್ಯ ಕಲ್ಪಿಸಲು ಸರ್ಕಾರ ಯಾವಾಗ, ಯಾವ ಕ್ರಮ ವಹಿಸುವುದು?

ಶ್ರೀ ಪ್ರಕಾಶ್ ಬಾ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು):

ಅ) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.